ದಿಃ 27.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಹೆಚ್.ಕೆ.ಡಿ. ವಕೀಲರಿಂದ ಅರ್ಜಿದಾರರ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ಅಪರಾಧ ಸಂಖ್ಯೆ 60/2022 ರ ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು, ದೂರಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು, ಅಪರಾಧ ಸಂಖ್ಯೆ 60/2022 ರಲ್ಲಿ ಪೊಲೀಸರು ಸಲ್ಲಿಸಿದ ಅಂತಿಮ ವರದಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು, ಸ್ಥಳ ಮಹಜರ್ ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು, ಕರಡು ನಕ್ಷೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು, ಛಾಯಾಚಿತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು, 4 ಜನ ಸಾಕ್ಷಿದಾರರ ಹೇಳಿಕೆಗಳ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ಅವುಗಳನ್ನು ನಿ.ಪಿ.7 ರಿಂದ 10 ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.11 ಎಂದು, ಆರೋಪಿಯ ಬಾವ ಚಿತ್ರವನ್ನು ನ್ಯಾಯಾಲಯಕ್ಕೆ ಪೊಲೀಸರು ಸಲ್ಲಿಸಿದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.12 ಎಂದು ಗುರುತಿಸಲಾಯಿತು.

3. ಎದುರುದಾರ ನಾನು ವಕೀಲರ ಮೂಲಕ ನೀಡಿದ ನೋಟೀಸಿಗೆ ನೀಡಿದ ಪ್ರತ್ಯುತ್ತರ ನೋಟೀಸನ್ನು ಹಾಜರುಮಾಡಿದ್ದು ಅದನ್ನು ನಿ.ಪಿ.13 ಎಂದು, ಅಂಚೆ ರಶೀದಿಯನ್ನು ಹಾಜರುಮಾಡಿದ್ದು ಅದನ್ನು ನಿ.ಪಿ.14 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ಹಾಜರುಮಾಡಿದ್ದು ಅದನ್ನು ನಿ.ಪಿ.15 ಎಂದು ಗುರುತಿಸಲಾಯಿತು.

4. ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ನಾನು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕವನ್ನು ಹಾಜರುಮಾಡಿದ್ದು ಅದನ್ನು ನಿ.ಪಿ.16 ಎಂದು, ನನ್ನ ಆಧಾರ್ ಕಾರ್ಡನ್ನು ಹಾಜರುಮಾಡಿದ್ದು ಅದನ್ನು ನಿ.ಪಿ.17 ಎಂದು, 38 ವೈದ್ಯಕೀಯ ರಶೀದಿಗಳನ್ನು ಅವುಗಳನ್ನು ಒಟ್ಟಾರೆಯಾಗಿ ನಿ.ಪಿ.18 ಎಂದು ಗುರುತಿಸಲಾಯಿತು.

5. ಫಾದರ್ ಮುಲ್ಲರ್ ಆಸ್ಪತ್ರೆಯವರು ನೀಡಿರುವ ಬಿಡುಗಡೆ ಪತ್ರವನ್ನು ಹಾಜರುಮಾಡಿದ್ದು ಅದನ್ನು ನಿ.ಪಿ.19 ಎಂದು, ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಹಾಸನ ರವರು ನೀಡಿದ 2 ಆಸ್ಪತ್ರೆಯ ಬಿಡುಗಡೆ ಪತ್ರಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿ.ಪಿ.20 ಮತ್ತು 21 ಎಂದು, ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಹಾಸನ ರವರು ನೀಡಿದ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಮಾಡಿದ್ದು ಅವುಗಳನ್ನು ನಿ.ಪಿ.22 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 13.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ಶ್ರೀ ಎಸ್.ಡಿ ವಕೀಲರಿಂದ ಎದುರುದಾರರ ಪರವಾಗಿ</u>

6. ಯಾವ ಸರ್ವೆ ನಂಬರ್ ನಲ್ಲಿ ಅಪಘಾತ ಆಗಿತ್ತು ಎಂದು ನಾನು ನನ್ನ ಅರ್ಜಿಯಲ್ಲಿ ಹೇಳಿದ್ದೇನೆ. ಮೂಡಿಗೆರೆ ಆಸ್ಪತ್ರೆಗೆ ನಾನು ಚಿಕಿತ್ಸೆಗೆ ಹೋದಾಗ ನನಗೆ ಪ್ರಜ್ಞೆ ಇರದ ಕಾರಣ ನನಗೆ ಯಾವ ರೀತಿ ಅಪಘಾತ ಆಗಿತ್ತು ಎಂದು ನಾನು ವೈದ್ಯರಿಗೆ ತಿಳಿಸಿಲ್ಲ, ನನ್ನ ಜೊತೆ ಬಂದವರು ಅಪಘಾತದ ವಿಚಾರವನ್ನು ತಿಳಿಸಿದ್ದಾರೆ. ನನ್ನ ಹೆಂಡತಿ ವೈದ್ಯರಿಗೆ ಅಪಘಾತದ ವಿಚಾರವನ್ನು ತಿಳಿಸಿದ್ದರು. ಆ ದಿನ ನನ್ನ ಜೊತೆ ಕೆಲಸಕ್ಕೆ ನನ್ನ ಹೆಂಡತಿ, ನನ್ನ ತಮ್ಮ, ನನ್ನ ಭಾವ ಬಂದಿದ್ದರು. ನನ್ನ ಹೆಂಡತಿ ವೈದ್ಯರಿಗೆ ನಾನು ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಮರದಿಂದ ಬಿದ್ದಿದ್ದೆ ಎಂದು ಹೇಳಿದ್ದಾರೆ ಎಂದು ನಂತರ ತಿಳಿದುಕೊಂಡಿದ್ದೇನೆ. ವೆನ್ ಲಾಕ್ ಆಸ್ಪತ್ರೆಗೆ ನಾನು ಬಿದ್ದ ದಿನವೇ ಹೋಗಿದ್ದೇನೆ. 12 ದಿನ ನಾನು ವೆನ್ ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ವೆನ್ ಲಾಕ್ ಆಸ್ಪತ್ರೆಯಲ್ಲಿ ವೈದ್ಯರಿಗೆ ಮರವನ್ನು ಕಸಿ ಮಾಡುವಾಗ ಬಿದ್ದಿದ್ದೆ ಎಂದು ತಿಳಿಸಿದ್ದೇನೆ. ಎದುರುದಾರನ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಬಿದ್ದಿದ್ದೆ ಎಂದು ವೈದ್ಯರಿಗೆ ತಿಳಿಸಿದ್ದೆ. ವೆನ್ ಲಾಕ್ ಆಸ್ಪತ್ರೆಯ ದಾಖಲೆಗಳನ್ನು ನಾನು ಹಾಜರು ಮಾಡಿಲ್ಲ. ಸಾಕ್ಷಿ ಸ್ವತಃ ಫಾದರ್ ಮುಲ್ಲರ್ ಆಸ್ಪತ್ರೆಯ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ.

7. ವೆನ್ ಲಾಕ್ ಆಸ್ಪತ್ರೆ ಸರ್ಕಾರಿ ಆಸ್ಪತ್ರೆ ಎಂದರೆ ಸರಿ. ಫಾದರ್ ಮುಲ್ಲರ್ ಆಸ್ಪತ್ರೆಯಿಂದ ನಾನು ದಿಃ 07.06.2022 ರಂದು ಬಿಡುಗಡೆಯಾಗಿದ್ದೇನೆ. ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆಯುವಾಗ ವೈದ್ಯರಿಗೆ ಎದುರುದಾರನ ತೋಟದಲ್ಲಿ ಮರಗಸಿ ಮಾಡುವಾಗ ಮರದಿಂದ ಬಿದಿದ್ದೇನೆ ಎಂದು ತಿಳಿಸಿದ್ದೇನೆ. ವೈದ್ಯರ ಬಳಿ ನಾನು ಮೂಡಿಗೆರೆಯ ಬಳಿ ಕೆಲಸ ಮಾಡುವಾಗ ಬಿದಿದ್ದೇನೆ ಎಂದು ಹೇಳಿಲ್ಲ. ಫಾದರ್ ಮುಲ್ಲರ್

ಆಸ್ಪತ್ರೆಯಲ್ಲಿ ತೋಟದಲ್ಲಿ ಕೆಲಸ ಮಾಡುವಾಗ ಮರದಿಂದ ಬಿದ್ದಿದ್ದೆ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿಯುತ್ತಾರೆ. ನಿ.ಪಿ.19 ರಲ್ಲಿ ನಾನು ಮೂಡಿಗೆರೆಯ ಬಳಿ ಮೇಲಿನಿಂದ ಕೆಳಗೆ ಬಿದ್ದೆ ಎಂದು ಬರೆದಿದೆ ಎಂದರೆ ಸಾಕ್ಷಿ ನಾನು ಬಿದ್ದಿದ್ದು ಬೈದುವಳ್ಳಿಯಲ್ಲಿ ಎಂದು ನುಡಿಯುತ್ತಾರೆ. ನಿ.ಪಿ.11 ರಲ್ಲಿ ನಾನು ಬೈದುವಳ್ಳಿಯ ಎದುರುದಾರನ ತೋಟದಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ವೆನ್ ಲಾಕ್ ಮತ್ತು ಫಾದರ್ ಮುಲ್ಲರ್ ಆಸ್ಪತ್ರೆಗಳಲಿಪ್ಲಿ ಚಿಕಿತ್ಸೆ ಪಡೆದ ಬಳಿಕ 1 ತಿಂಗಳ ಒಳಗೆ ಧರ್ಮಸ್ಥಳ ಆಯುರ್ವೇದಿಕ್ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದೆ. ಧರ್ಮಸ್ಥಳ ಆಯುರ್ವೇದಿಕ್ ಆಸ್ಪತ್ರೆಯಲ್ಲಿ ಎದುರುದಾರನ ಬೈದುವಳ್ಳಿ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಮರದಿಂದ ಬಿದಿದ್ದೇನೆ ಎಂದು ಹೇಳಿದ್ದೇನೆ.

8. ಧರ್ಮಸ್ಥಳ ಆಯುರ್ವೇದಿಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ನಾನು ಮೂಡಿಗೆರೆ, ವೆನ್ ಲಾಕ್ ಮತ್ತು ಫಾದರ್ ಮುಲ್ಲರ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ವಿಚಾರವನ್ನು ಹೇಳಿದ್ದೇನೆ. ನಿಪಿ.20 ಮತ್ತು 21 ದಾಖಲೆಗಳಲ್ಲಿ ನಾನು ಎಲ್ಲಿ ಬಿದ್ದು ಅಪಘಾತ ಪಡಿಸಿಕೊಂಡಿದ್ದೇನೆ ಎಂದು ನಮೂದು ಇಲ್ಲ ಎಂದರೆ ಸಾಕ್ಷಿ ನಾನು ಅಪಘಾತದ ವಿಚಾರವನ್ನು ತಿಳಿಸಿದ್ದೇನೆ, ಅವರು ಬರೆದಿರುವ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

9. ಮಂಗಳ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆಯನ್ನು ಪಡೆದಿಲ್ಲ. ನನ್ನ ಅರ್ಜಿಯಲ್ಲಿ ಬರೆದಿರುವ ವಿಚಾರವನ್ನು ನಾನು ತಿಳಿದುಕೊಂಡಿಲ್ಲ. ಈ ಕೇಸಿನಲ್ಲಿ ಹಾಜರು ಪಡಿಸಿರುವ ದಾಖಲೆಗಳು ನನಗೆ ಗೊತ್ತು. ಎದುರುದಾರರ ಚಿಕ್ಕಮ್ಮ ಶಾರದಮ್ಮ ರವರಿಗೆ ಸರ್ವೆ ನಂಬರ್ 256 ರಲ್ಲಿ 1 ಎಕರೆ 30 ಗುಂಟೆ ಜಮೀನು ಮತ್ತು ಎದುರುದಾರನಿಗೆ ಅದೇ ಸರ್ವೆ ನಂಬರ್ ನಲ್ಲಿ 1 ಎಕರೆ 30 ಗುಂಟೆ ಜಮೀನು ಇರುತ್ತದೆ. ನಿ.ಪಿ.5 ಕರಡು ನಕ್ಷೆಯಲ್ಲಿ ಎದುರುದಾರ ವಿರೇಂದ್ರ ರವರ ತೋಟ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಕೆಲಸ ಮಾಡಲು ಹತ್ತಿದ ಮರ ನಂದಿ ಮರ ಆಗಿತ್ತು. ನಾನು ಆ ಮರದ ಎಲ್ಲಾ ಕೊನೆಗಳನ್ನು ಕಡಿದಿರಲಿಲ್ಲ, 20 ಅಡಿ ಹತ್ತಿದ ತಕ್ಷಣ ಕೆಳಗೆ ಬಿದಿದ್ದೆ. ನಿ.ಪಿ.5 ರಲ್ಲಿ ಬಸರೀ ಮರದಿಂದ ಬಿದಿದ್ದೇನೆ

ಎಂದು ಬರೆದಿದೆ ಎಂದರೆ ಸಾಕ್ಷಿ ಗೋಣಿಬೀಡು ಪೊಲೀಸರು ಆ ರೀತಿ ಬರೆದಿದ್ದಾರೆ ಎಂದು ನುಡಿಯುತ್ತಾರೆ. ನಿ.ಪಿ.5 ರಲ್ಲಿ ಶಾರದಮ್ಮ ರವರ ಜಮೀನು ಯಾವ ದಿಕ್ಕಿನಲ್ಲಿಯು ಬರುತ್ತದೆ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ನಿ.ಪಿ.4 ರಲ್ಲಿ ಸರ್ವೆ ನಂಬರ್ ಬರೆದಿಲ್ಲ ಎಂದರೆ ಸರಿಯಲ್ಲ. ನಿ.ಪಿ.6 ಛಾಯಚಿತ್ರದಲ್ಲಿ ಮರಕ್ಕೆ ಕೊಂಬೆಗಳು ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ಛಾಯಚಿತ್ರದಲ್ಲಿ ಕಂಡು ಬರುವುದಿಲ್ಲ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 17.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಶ್ರೀ ಎಸ್.ಡಿ ವಕೀಲರಿಂದ ಎದುರುದಾರರ ಪರವಾಗಿ

10. ಧರ್ಮಸ್ಥಳ ಆಯುರ್ವೇದಿಕ್ ಆಸ್ಪತ್ರೆ ಮತ್ತು ವೆನ್ ಲಾಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಆಸ್ಪತ್ರೆಯ ಬಿಡುಗಡೆ ಪತ್ರವನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ಧರ್ಮಸ್ಥಳ ಆಯುರ್ವೇದಿಕ್ ಆಸ್ಪತ್ರೆ ಮತ್ತು ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ, ಆ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಸ್ವತಃ ನನ್ನನ್ನು ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆದರೆ ಆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಿಲ್ಲ, ಫಾದರ್ ಮುಲ್ಲರ್ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ನುಡಿಯುತ್ತಾರೆ. ವೆನ್ ಲಾಕ್ ಆಸ್ಪತ್ರೆಯಲ್ಲಿ ಎಷ್ಟು ಹೊತ್ತು ಇದ್ದೆ ಎಂದು ಹೇಳಲು ನನಗೆ ಆಗ ಪ್ರಜ್ಞೆ ಇರಲಿಲ್ಲ. ಹಾಸನ ಮಂಗಳ ಆಸ್ಪತ್ರೆಯಲ್ಲಿ ಎಷ್ಟು ಹೊತ್ತು ಇದ್ದೀರಿ ಎಂದರೆ ಸಾಕ್ಷಿ ನನ್ನನ್ನು ಮಂಗಳ ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.5 ರಲ್ಲಿ ಆ ಜಾಗ ಯಾರಿಗೆ ಸೇರಿತ್ತು ಎಂದು ಬರೆದಿಲ್ಲ ಎಂದರೆ ಸರಿ. ನಿ.ಪಿ.5 ಕರಡು ನಕ್ಷೆಯಲ್ಲಿ ವಿರೇಂದ್ರ ತೋಟದ ಕಚ್ಚಾ ರಸ್ತೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಕಾಲು ದಾರಿಯನ್ನು ಬಿಟ್ಟರೆ ಯಾವುದೇ ವಾಹನಗಳು ಓಡಾಡುವ ರಸ್ತೆ ಅಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಶಾರದಮ್ಮ ರವರ ತೋಟ ಎಲ್ಲಿ ಇದೆ ಎಂದರೆ ಸಾಕ್ಷಿ ಶಾರದಮ್ಮ ಮತ್ತು ವಿರೇಂದ್ರ ರವರ ತೋಟಗಳು ಒಂದೇ ಜಾಗದಲ್ಲಿ ಅಕ್ಕ ಪಕ್ಕ ಇವೆ ಎಂದು ನುಡಿಯುತ್ತಾರೆ. ಕಾಲು ದಾರಿಯಲ್ಲಿ ಹೋದಾಗ ಮೊದಲು ಸುಬ್ಬರಾಯ ರವರ ತೋಟ ಬರುತ್ತದೆ, ನಂತರ ಶಾರದಮ್ಮ ರವರ ತೋಟ, ಶಾರದಮ್ಮ ರವರ ತೋಟದ ಮೂಲಕ ಎದುರುದಾರನ ತೋಟಕ್ಕೆ ಹೋಗಬೇಕಾಗುತ್ತದೆ ಎಂದು ನುಡಿಯುತ್ತಾರೆ. ಶಾರದಮ್ಮ ಮತ್ತು ಎದುರುದಾರನ ತೋಟದ ಮಧ್ಯ ಬೇಲಿ ಇಲ್ಲ, ಕಾಲುದಾರಿ

ಇರುತ್ತದೆ. ಶಾರದಮ್ಮ ರವರಿಗೆ ಸೇರಿದ ತೋಟವನ್ನು ವಿಣೇಶ್ ಎಂಬುವವರು ನೋಡುತ್ತಿದ್ದಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಶಾರದಮ್ಮ ಮತ್ತು ಎದುರುದಾರನಿಗೆ ಪಾಲು ಇದೆ ಎಂದು ನುಡಿಯುತ್ತಾರೆ. ವಿಣೇಶ್ ರವರು ಸ್ವಾಧೀನ ಇರುವ ಜಾಗಕ್ಕೆ ನಾನು ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಶಾರದಮ್ಮ ರವರ ಹೆಸರಿನಲ್ಲಿ ಇರುವ ಜಾಗವನ್ನು ಆಕೆಗೆ ತಿಳಿಯದಂತೆ ವಿಣೇಶ್ ರವರು ಆತನ ತಾಯಿಯ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರವಾಗಿ ವಿಣೇಶ್ ಮತ್ತು ಎದುರುದಾರನ ನಡುವೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳಲ್ಲಿ ವಿಚಾರಣೆಯಲ್ಲಿ ಇದ್ದವು ಎಂದರೆ ನನಗೆ ಗೊತ್ತಿಲ್ಲ. ವಿರೇಂದ್ರ ರವರು ವಿಣೇಶ್ ಮತ್ತು ಆತನ ತಾಯಿಯ ವಿರುದ್ಧ O.S.122/2020 ರಂತೆ ಸಿವಿಲ್ ದಾವೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

11. ನಾನು ಎದುರುದಾರನ ತೋಟಕ್ಕೆ ಎಂದಿಗೂ ಕೆಲಸಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ದಿಃ 07.06.2022 ರಂದು ಎದುರುದಾರನ ತೋಟಕ್ಕೆ ಕೆಲಸಕ್ಕೆ ಹೋದರೆ ಆತನ ಹೆಸರು ಆಸ್ಪತ್ರೆಯ ದಾಖಲೆಯಲ್ಲಿ ಬರೆಸಿಸುತ್ತಿದ್ದೆ, ಆತನ ತೋಟಕ್ಕೆ ಆ ದಿನ ಕೆಲಸಕ್ಕೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದಲೇ ನಾನು ವಿಣೇಶ್ ರವರ ಜೊತೆ ಶಾಮೀಲ್ ಆಗಿ ಎದುರುದಾರನ ಮೇಲೆ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಕ್ರಿಮಿನಲ್ ಪ್ರಕರಣದಲ್ಲಿ ನಾನು ಎದುರುದಾರನ ತೋಟದಲ್ಲಿ ಕೆಲಸ ಮಾಡಿಲ್ಲ ಎಂಬ ಕಾರಣದಿಂದ ಆ ಕೇಸು ಕುಲಾಸೆಯಾಗಿತ್ತು ಎಂದರೆ ಸರಿಯಲ್ಲ. ನಾನು ನಿಜವಾಗಿಯು ಎದುರುದಾರನ ತೋಟದಲ್ಲಿ ಕೆಲಸ ಮಾಡಿದ್ದರೆ ನಾನು ಅರ್ಜಿಯಲ್ಲಿ ಮತ್ತು ನಿ.ಪಿ.13 ರಲ್ಲಿ ಸರ್ವೆ ನಂಬರ್ 256 ಅನ್ನು ಕಾಣಿಸುತ್ತಿದ್ದೆ ಎಂದರೆ ಸರಿಯಲ್ಲ. ನಿ.ಪಿ.5 ಕರಡು ನಕ್ಷೆಯಲ್ಲಿ ಯಾವುದೇ ಸರ್ವೆ ನಂಬರ್ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.2 ದೂರು ಮತ್ತು ನಿ.ಪಿ.4 ಸ್ಥಳ ಮಹಜರ್ ನಲ್ಲಿಯು ಸಹ ಸರ್ವೆ ನಂಬರ್ 256 ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿ ಇದ್ದ ಕಾರಣ ಪೊಲೀಸರು

ಸ್ಥಳದಲ್ಲಿ ಮಹಜರ್ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ದಾಖಲೆಗಳನ್ನು ಸೃಷ್ಟಿಸಿ ಎದುರುದಾರನಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

12. ನಿ.ಪಿ.19 ರಲ್ಲಿ ನಾನು ಬಿದ್ದ ಸ್ಥಳವನ್ನು ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ದಿನ ರಾತ್ರಿ ಪ್ರಜ್ಞೆ ಬಂದಿತ್ತು. ಪ್ರಜ್ಞೆ ಬಂದ ಮರು ದಿನ ನನ್ನನ್ನು ವೈದ್ಯರು ವಿಚಾರಿಸಿಲ್ಲ, ನನ್ನ ಹೆಂಡತಿಯನ್ನು ವಿಚಾರಿಸಿದ್ದರು. ನಿ.ಪಿ.19 ಅನ್ನು ನಾನು ಆಸ್ಪತ್ರೆಯಿಂದ ಬಿಡುಗಡೆಯಾಗುವಾಗ ಪಡೆದಿದ್ದೆ. ನಿ.ಪಿ.19 ಅನ್ನು ನೀಡುವಾಗ ವೈದ್ಯರು ನನಗೆ ಎಲ್ಲಿ ಅಪಘಾತ ಆಗಿದ್ದು ಎಂದು ಕೇಳಿದ್ದರು. ನಾನು ಎದುರುದಾರನ ತೋಟದಲ್ಲಿ ಕೆಲಸ ಮಾಡುವಾಗ ಬಿದಿದ್ದೆ ಎಂದು ವೈದ್ಯರಿಗೆ ನಿ.ಪಿ.19 ನೀಡುವಾಗ ತಿಳಿಸಿದ್ದೆ. ನಾನು ಧರ್ಮಸ್ಥಳದ ಆಯುರ್ವೇದ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗುವಾಗ ಮಾತನಾಡುತ್ತಿದ್ದೆ. ಧರ್ಮಸ್ಥಳದ ಆಯುರ್ವೇದ ಆಸ್ಪತ್ರೆಯಲ್ಲಿ ನನಗೆ ಅಪಘಾತ ಯಾವ ರೀತಿ ಆಗಿದ್ದು ಎಂದು ಕೇಳಿದ್ದರು. ವೈದ್ಯರಿಗೆ ನಾನು ಎದುರುದಾರನ ತೋಟದಲ್ಲಿ ಕೆಲಸ ಮಾಡುವಾಗ ಬಿದ್ದಿದ್ದೆ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಮರದಲ್ಲಿ ಕೆಲಸ ಮಾಡುವಾಗ ಬಿದ್ದಿದ್ದೆ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ . ವಿರೇಂದ್ರ ರವರ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ನಾನು ಬಿದ್ದೆ ಎಂದು ವೈದ್ಯರಿಗೆ ತಿಳಿಸಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ಅವರು ಕೇಳದ ಕಾರಣ ನಾನು ಹೇಳಲಿಲ್ಲ ಎಂದು ನುಡಿಯುತ್ತಾರೆ.

13. ಗಿರೀಶ್ ಬಿ.ಬಿ ರವರು ಕ್ರಿಮಿನಲ್ ಪ್ರಕರಣದಲ್ಲಿ ನನ್ನನ್ನು ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಯಲ್ಲಿ ಕರೆದುಕೊಂಡು ಹೋಗಿ ದಾಖಲು ಮಾಡಿದ್ದೆ ಎಂದು ಹೇಳಿದ್ದಾರೆ ಎಂದರೆ ಆ ರೀತಿ ತಪ್ಪಿನಿಂದ ಅವರು ಹೇಳಿದ್ದಾರೆ ಎಂದು ನುಡಿಯುತ್ತಾರೆ. ವಿಗ್ನೇಶ್ ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ನಿ.ಪಿ.9 ಮತ್ತು 10 ಹೇಳಿಕೆಗಳಲ್ಲಿ ಗಿರೀಶ್ ಬಿ.ಬಿ ರವರು ನನ್ನನ್ನು

ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಯಲ್ಲಿ ಕರೆದುಕೊಂಡು ಹೋಗಿ ದಾಖಲು ಮಾಡಿದ್ದ ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ ನಾನು ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದು ನುಡಿಯುತ್ತಾರೆ. ನಾನು ಎದುರುದಾರನ ತೋಟಕ್ಕೆ ಹೋದಾಗ ಏಣಿ ಮತ್ತು ಇತರೆ ಸಲಕರಣೆಗಳನ್ನು ಎದುರುದಾರನಲ್ಲಿ ಕೇಳಿದ್ದೆ, ಆತ ನೀಡಲಿಲ್ಲ. ಆ ರೀತಿ ಸಲಕರಣೆಗಳನ್ನು ಕೇಳಿದ ಬಳಿಕ 15 ರಿಂದ 20 ದಿನ ಕೆಲಸ ಮಾಡಿದ್ದೇನೆ. ಏಣಿ ಮತ್ತು ಇತರೆ ಸಲಕರಣೆಗಳನ್ನು ನೀಡದೇ ಹೋದರೆ ನಾನು ಕೆಲಸ ಮಾಡುವುದಿಲ್ಲ ಎಂದು ಎದುರುದಾರನಿಗೆ ತಿಳಿಸಿದ್ದೆ, ಆತ ಏನೇ ಆದರು ನಾನು ನೋಡಿಕೊಳ್ಳುತ್ತೇನೆ ಎಂದು ಬಲವಂತವಾಗಿ ಕೆಲಸ ಮಾಡಿಸಿದ್ದರು ಎಂದು ನುಡಿಯುತ್ತಾರೆ. ಬಲವಂತವಾಗಿ ನನ್ನಿಂದ ಕೆಲಸ ಮಾಡಿಸುತ್ತಿದ್ದಾರೆ ಎಂದು ನಾನು ದೂರನ್ನು ನೀಡಲಿಲ್ಲ, ನಂಬಿಕೆಯಿಂದ ಕೆಲಸ ಮಾಡಿದ್ದೆ. ಎದುರುದಾರ ಸಲಕರಣೆಗಳನ್ನು ನೀಡದೇ ಬಲವಂತವಾಗಿ ನನ್ನಿಂದ ಕೆಲಸವನ್ನು ಮಾಡಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯ ರಸೀದಿಗಳಿಗೂ ಈ ಕೇಸಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಎದುರುದಾರನ ವಿರುದ್ಧ ಪ್ರಕರಣವನ್ನು ದಾಖಲಿಸಲು ಯಾವುದೇ ವ್ಯಾಜ್ಯ ಕಾರಣಗಳು ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ</u>

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ